**<u>ದಿನಾಂಕಃ 10-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಎಸ್.ಎಫ್.ಡಬ್ಲ್ಯೂ 1ನೇ ಪ್ರತಿವಾದಿ ಪರ ವಕೀಲರಿಂದಃ</u>**

**36.** ನಾನು 1ನೇ ಪ್ರತಿವಾದಿ ಹಾಗೂ ಆತನ ಹೆಂಡತಿಯ ವಿರುದ್ಧ ನನ್ನ ತಾಯಿಯ ಸಹಿ ಸುಳ್ಳು ಮಾಡಿರುತ್ತಾರೆ ಅಂತಾ ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿರುತ್ತೇನೆ. ನಾನು ದಾಖಲಿಸಿದ ಕ್ರಿಮಿನಲ್ ಪ್ರಕರಣದಲ್ಲಿ ತಯಾರಿಸಿದ ಪಂಚನಾಮೆ ಕಾಲಕ್ಕೆ ನಾನು ಹಾಜರು ಇರಲಿಲ್ಲ. ಪಂಚನಾಮೆ ಎಲ್ಲಿ ಮಾಡಿರುತ್ತಾರೆ ಅಂತಾ ಗೊತ್ತಿಲ್ಲ. ಕ್ರಿಮಿನಲ್ ಪ್ರಕರಣದಲ್ಲಿ ಶೌಕತ್ತಅಲಿ ರಂಗರೇಜ್, ಮೆಹಬೂಬಸಾಬ ಅತ್ತಾರ ಇವರು ಏನೂ ಹೇಳಿಕೆ ನೀಡಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ನನ್ನ ತಾಯಿ ಉರ್ದು ಬಾಷೆಯಲ್ಲಿ ಸಹಿ ಮಾಡುತ್ತಿದ್ದರು. ಆ ರೀತಿ ಹಿಬಾ ಮೇಲಿರುವ ನನ್ನ ತಾಯಿಯ ಸಹಿಯನ್ನು ತಜ್ಞರ ಪರೀಕ್ಷೆಗೆ ಕಳುಹಿಸಲು ನನಗೆ ತೊಂದರೆ ಇರುವುದಿಲ್ಲ. ಹಿಭಾ ಮೇಲೆ ಸಾಕ್ಷಿದಾರರು ಅಂತಾ ಸಹಿ ಮಾಡಿದ ಶೌಕತ್ತಅಲಿ ರಂಗರೇಜ್ ಹಾಗೂ ಮೆಹಬೂಬಸಾಬ ಅತ್ತಾರ, ಶಬ್ಬೀರಅಹ್ಮದ ಮೌಶಿನ ಇವರನ್ನು ನಾನು ವಿಚಾರಿಸಿಲ್ಲ.

**37.** ನನ್ನ ತಾಯಿಯ ಬಳಿ ಹಣ, ಬಂಗಾರ ಇತ್ತು ಅಂದರೆ ಸಾಕ್ಷಿ ಮೊದಲಿಗೆ ಸುಳ್ಳು ಅಂತಾ ಹೇಳುತ್ತಾರೆ ನಂತರ ಇತ್ತು ಅಂತಾ ಹೇಳುತ್ತಾರೆ. ನನ್ನ ತಾಯಿ ತೀರಿಕೊಂಡಾಗ ಅವಳ ಅಂತಿಮ ಕಾರ್ಯದ ಹೊತ್ತಿಗೆ ನಾವು ಹಾಗೂ 2ನೇ ಪ್ರತಿವಾದಿ ನನ್ನ ತಾಯಿಯ ಹಣ, ವಡವೆ ಹಾಗೂ ಬಂಗಾರವನ್ನು ದೋಚಿಕೊಂಡು ಹೋಗಿರುತ್ತೇವೆ ಅಂದರೆ ಸರಿಯಲ್ಲ. ನನ್ನ ತಾಯಿ ಭಕ್ಷೀಸ ಪತ್ರ ಮಾಡುವ ಕಾಲಕ್ಕೆ ನಾನು ಸಹ ಹಾಜರಿದ್ದೆ, ನನ್ನ ಸಮಕ್ಷಮ ಅವಳು ಭಕ್ಷೀಸ ಪತ್ರ ಮಾಡಿರುತ್ತಾಳೆ ಅಂದರೆ ಸುಳ್ಳು. 1995 ಕ್ಕಿಂತ ಮುಂಚೆ ನನ್ನ ತಂದೆ ಆರಾಮ ಇಲ್ಲದೇ ಇದ್ದುದ್ದರಿಂದ ಅವರು ಕೆಲಸ ಮಾಡುತ್ತಿರಲಿಲ್ಲ ಅಂದರೆ ಸುಳ್ಳು. ನನ್ನ ತಂದೆ

ಜೀವಿತಅವಧಿಯಲ್ಲಿ ಎಲ್ಲರ ಮಕ್ಕಳ ಹತ್ತಿರ ಇರುತ್ತಿದ್ದರು ಅಂದರೆ ಸಾಕ್ಷಿ ಕೇವಲ ಹೆಣ್ಣು ಮಕ್ಕಳ ಬಳಿ ಮಾತ್ರ ಇರುತ್ತಿದ್ದರು ಅಂತಾ ಹೇಳುತ್ತಾರೆ. ನನ್ನ ತಂದೆ ಹೆಣ್ಣು ಮಕ್ಕಳ ಹತ್ತಿರ ಇರುತ್ತಿದ್ದರು ಅಂತಾ ದಾವೆಯಲ್ಲಿ, ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುತ್ತೇನೆ ಅಂದರೆ ಸಾಕ್ಷಿ ಬರೆಸಿರುತ್ತೇನೆ ಅಂತಾ ಹೇಳುತ್ತಾರೆ. ನನ್ನ ತಂದೆಯ ಯೋಗಕ್ಷೇಮವನ್ನು 1 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದ ಅಂದರೆ ಸುಳ್ಳು.

**38.** ನನ್ನ ತಾಯಿ ತೀರಿಕೊಂಡ 9 ತಿಂಗಳ ಬಳಿಕ 1 ನೇ ಪ್ರತಿವಾದಿಯ ಹೆಸರಿಗೆ ಹಿಭಾ ಮಾಡಿಕೊಟ್ಟ ವಿಷಯ ಗೊತ್ತಾಗಿರುತ್ತದೆ. ಹಿಭಾ ಮಾಡುವ ಕಾಲಕ್ಕೆ ಯಾರು ಹಾಜರಿದ್ದರು ಹಾಗೂ ಅದನ್ನು ಯಾರು ಬರೆದಿರುತ್ತಾರೆ ಅಂತಾ ನನಗೆ ಗೊತ್ತಿಲ್ಲ. ಹಿಭಾ ಪತ್ರದಲ್ಲಿ ನನ್ನ ತಾಯಿ 1 ನೇ ಪ್ರತಿವಾದಿಗೆ ದಿನಾಂಕಃ 28-05-2005 ರ ಮುಕ್ತೀಯಾರ ಪತ್ರದ ಬಗ್ಗೆ ಉಲ್ಲೇಖ ಮಾಡಿರುತ್ತಾರೆ ಅಂದರೆ ಸುಳ್ಳು. ನನ್ನ ತಾಯಿ 1 ನೇ ಪ್ರತಿವಾದಿಗೆ ದಾವಾಸ್ತಿಯ ಕಬ್ಜಾ ವಹಿವಾಟು ಮಾಡಲು ತೊಂದರೆಯಾಗುತ್ತದೆ ಅಂತಾ ಮುಕ್ತೀಯಾರ ಪತ್ರ ಬರೆದುಕೊಟ್ಟಿದ್ದರು ಅಂದರೆ ಸುಳ್ಳು. ಹಿಭಾ ಪತ್ರದಲ್ಲಿ ನನ್ನ ತಾಯಿ ದಾವಾಸ್ತಿಯ ಕಬ್ಜಾ ವಹಿವಾಟನ್ನು 1 ನೇ ಪ್ರತಿವಾದಿಗೆ ಕೊಟ್ಟ ಬಗ್ಗೆ ಬರೆಸಿರುತ್ತಾರೆ ಅಂದರೆ ಸಾಕ್ಷಿ ಇಲ್ಲಾ ಅಂತಾ ಹೇಳುತ್ತಾರೆ. ಕಂದಾಯ ಇಲಾಖೆಯ ದಾಖಲೆಗಳಲ್ಲಿ ತೊಂದರೆಯಾಗುತ್ತದೆ ಅಂತಾ ನನ್ನ ತಾಯಿ ದೃಢೀಕರಣ ಪತ್ರ ಸಹ ಬರೆದುಕೊಟ್ಟಿದ್ದಳು ಅಂದರೆ ಸಾಕ್ಷಿ ಇಲ್ಲಾ ಅಂತಾ ಹೇಳುತ್ತಾರೆ. 1 ನೇ ಪ್ರತಿವಾದಿ ತನ್ನ ತಾಯಿ ಇರುವವರೆಗೆ ಖಾತೆ ಬದಲಾವಣೆ ಮಾಡಬಾರದು ಅಂತಾ ಮಾಡಿರಲಿಲ್ಲ ಅಂದರೆ ಸುಳ್ಳು.

**39.** ನನ್ನ ತಾಯಿ ಜೀವಂತ ಇರುವಾಗ ವ್ಯವಹಾರದ ಕುರಿತು ಬ್ಯಾಂಕಿಗೆ ಹೋಗಿ ಬಂದು ಮಾಡುತ್ತಿದ್ದರು ಅಂದರೆ ಸರಿ. ಆಗ ಅವಳ ಜೊತೆ 1 ನೇ ಪ್ರತಿವಾದಿ ಸಹ ಹೋಗುತ್ತಿದ್ದ ಅಂದರೆ ಸಾಕ್ಷಿ ನನ್ನ ತಂದೆ ಹೋಗುತ್ತಿದ್ದರು ಅಂತಾ ಹೇಳುತ್ತಾರೆ. ನನ್ನ ತಾಯಿ ತೀರಿಕೊಳ್ಳುವ ಕಾಲಕ್ಕೆ ಮಾನಸಿಕವಾಗಿ ಚೆನ್ನಾಗಿ ಇದ್ದರು. 1 ನೇ

ಪ್ರತಿವಾದಿಗೆ ನನ್ನ ತಾಯಿ ದಾವಾಸ್ತಿಯ ಹಿಭಾ ಮಾಡಿಕೊಟ್ಟಾಗಿನಿಂದ ಆತನೇ ಅದನ್ನು ಮಾಲ್ಕೀ ನಾತೆಯಿಂದ ಕಬ್ಜಾ ವಹಿವಾಟು ಮಾಡುತ್ತಿದ್ದಾನೆ ಅಂದರೆ ಇಲ್ಲಾ ಅಂತಾ ಹೇಳುತ್ತಾರೆ. ನನ್ನ ತಾಯಿ ಜೀವಂತ ಇರುವಾಗ ಮೌಖಿಕ ಭಕ್ಷೀಸನ್ನು ರದ್ದು ಮಾಡಿ ಹಿಸ್ಸೆ ಕೊಡಿ ಅಂತಾ ಕೇಳಿಲ್ಲ. ನನ್ನ ತಾಯಿ ನಮ್ಮ ಜೊತೆಗೆ ಇದ್ದಳು ಅಂತಾ ದಾವೆಯಲ್ಲಿ ಬರೆಸಿಲ್ಲ ಅಂದರೆ ಸಾಕ್ಷಿ ಬರೆಸಿರುತ್ತೇನೆ ಅಂತಾ ಹೇಳುತ್ತಾರೆ.

**40.** ದಾವಾಸ್ತಿ ಮನೆಯಲ್ಲಿ ಕೆಳಮಹಡಿಯಲ್ಲಿ 1 ನೇ ಪ್ರತಿವಾದಿ ಹಾಗೂ 1 ನೇ ಮಹಡಿಯಲ್ಲಿ ನನ್ನ ತಂದೆ ವಾಸವಾಗಿದ್ದರು ಅಂತಾ ವಾದ ಪತ್ರದಲ್ಲಿ ಬರೆಸಿರುತ್ತೇನೆ ಅಂದರೆ ಸಾಕ್ಷಿ ಎಲ್ಲರೂ ವಾಸವಾಗಿದ್ದರು ಅಂತಾ ಹೇಳುತ್ತಾರೆ. ವಾದ ಪತ್ರದಲ್ಲಿ ಎಲ್ಲರೂ ದಾವಾಸ್ತಿಯಲ್ಲಿ ವಾಸವಾಗಿದ್ದರು ಅಂತಾ ಬರೆಸಿಲ್ಲ ಅಂದರೆ ಬರೆಸಿರುತ್ತೇನೆ ಅಂತಾ ಹೇಳುತ್ತಾರೆ. ನಾನು ಪ್ರತಿವಾದಿಗೆ ನ್ಯಾಯಾಲಯಕ್ಕೆ ನನ್ನ ಅಣ್ಣನಾದ 2 ನೇ ಪ್ರತಿವಾದಿಯೊಂದಿಗೆ ಬರುತ್ತೇನೆ ಅಂದರೆ ಸಾಕ್ಷಿ ಇಲ್ಲಾ ಅಂತಾ ಹೇಳುತ್ತಾರೆ. 2 ನೇ ಪ್ರತಿವಾದಿಯ ಮಾತು ಕೇಳಿ 1 ನೇ ಪ್ರತಿವಾದಿ ಹಾಗೂ ಆತನ ಹೆಂಡತಿಯ ವಿರುದ್ಧ ಸಾಕಷ್ಟು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುತ್ತಾ ಬಂದಿರುತ್ತೇನೆ ಅಂದರೆ ಸರಿಯಲ್ಲ.

**41.** ದಿನಾಂಕಃ 18-04-2016 ರಂದು ಖಾತೆ ಬದಲಾವಣೆ ಮಾಡುವ ಕುರಿತು ನಾನು ಅರ್ಜಿ ನೀಡಿದ್ದೆ ಅಂದರೆ ಸಾಕ್ಷಿ ಇಬ್ಬರೂ ಮಾಡಿರುತ್ತೇವೆ ಅಂತಾ ಹೇಳುತ್ತಾರೆ, ಸಾಕ್ಷಿ ಮುಂದುವರೆದು ಹೇಳುತ್ತಾರೆ ನನ್ನ ಬಳಿ ಈಗ ಕನ್ನಡಕ ಇರುವುದಿಲ್ಲ ಸರಿಯಾಗಿ ಕಾಣುವುದಿಲ್ಲ ಅಂತಾ ಹೇಳುತ್ತಾರೆ. ಸಾಕ್ಷಿಯು ಸಿಟಿ ಸರ್ವೆ ಕಛೇರಿಗೆ ನೀಡಿದ ಅರ್ಜಿಯನ್ನು **ನಿಡಿ-1** ಅಂತಾ ವಾದಿ ಪರ ವಕೀಲರ ತಕರಾರರಿಗೆ ಒಳಪಟ್ಟು ಗುರುತಿಸಲಾಯಿತು. ದಿನಾಂಕಃ 01-09-2015 ರಂದು ಇನ್ನೊಂದು ಅರ್ಜಿಯನ್ನು ಸಿಟಿ ಸರ್ವೆ ಕಛೇರಿಗೆ ನೀಡಿದ್ದೆ ಅಂದರೆ ಸಾಕ್ಷಿ ನನ್ನ ತಾಯಿ ತೀರಿಕೊಂಡ ನಂತರ ಎಲ್ಲರ ಹೆಸರು ಬರಬೇಕು ಅಂತಾ ನೀಡಿದ್ದೆ ಅಂತಾ

ಹೇಳುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು **ನಿಡಿ-2** ಅಂತಾ ಗುರುತಿಸಲಾಯಿತು. ದಿನಾಂಕಃ 15-10-2015 ರಂದು ಈ ನ್ಯಾಯಾಲಯದ ಆದೇಶದ ಪ್ರಕಾರ ದಾವಾಸ್ತಿಯನ್ನು ಮಾರಾಟ ಮಾಡಬಾರದು ಅಂತಾ ದಾಖಲೆಗಳಲ್ಲಿ ಭೋಜಾ ಇರಿಸುವಂತೆ ಅರ್ಜಿ ನೀಡಿದ್ದೆ ಅಂದರೆ ಸಾಕ್ಷಿ ಇರಬಹುದು ಅಂತಾ ಹೇಳುತ್ತಾರೆ.

**42.** ಹಿಭಾ ಪತ್ರದ ಆಧಾರದ ಮೇಲೆ ಕೇವಲ 1 ನೇ ಪ್ರತಿವಾದಿ ಮಾತ್ರ ದಾವಾಸ್ತಿಯ ಕಬ್ಜಾ ವಹಿವಾಟಿಯಲ್ಲಿ ಇರುತ್ತಾನೆ ಬೇರೆ ಯಾರು ಇರುವುದಿಲ್ಲ ಅಂದರೆ ಸುಳ್ಳು. ನಾವು ದಾವಾಸ್ತಿಯ ಕಬ್ಜಾ ವಹಿವಾಟಿಯಲ್ಲಿ ಇಲ್ಲದೇ ಇರುವುದರಿಂದ ಈಗ ತುಂಬಿದ ನ್ಯಾಯಾಲಯದ ಶುಲ್ಕ ಸರಿಯಾಗಿ ಇರುವುದಿಲ್ಲ ಅಂದರೆ ಸುಳ್ಳು. ನಾವು ವಾದಿಯರು ಹಾಗೂ 2 ನೇ ಪ್ರತಿವಾದಿಗೆ ಹಿಭಾ ಆದ ವಿಷಯ ಗೊತ್ತಿದ್ದರು ಸಹ ದಾವಾಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**-ಸಹಿ- 10-07-2024**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.

ಓ.ಎಸ್. ನಂ.159-2015
ಪಿ.ಡಬ್ಲ್ಯೂ- 1